**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ:86/2020**

**ಸಾಕ್ಷಿಯನ್ನು ದಿಃ 10.07.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ರವಿ | ಸಿಡಬ್ಲ್ಯೂ:2 | ಪಿಡಬ್ಲ್ಯೂ:2 |
| ತಂದೆಯ ಹೆಸರು | ತಮ್ಮಯ್ಯ | | |
| ವಯಸ್ಸು | 55 ವರ್ಷ | | |
| ಉದ್ಯೋಗ | ವ್ಯವಸಾಯ | | |
| ವಾಸಸ್ಥಳ | ಆಡಿಗನಹಳ್ಳಿ, ಹುಣಸೂರು. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಆರೋಪಿತರು ಗೊತ್ತು, ಅವರು ನಮ್ಮ ಊರಿನವರು. ಚಾಸಾ 1 ರಮೇಶ್ ಗೊತ್ತು ಅವರು ನಮ್ಮ ಊರಿನವರು. ಚಾಸಾ 3 ನಮ್ಮ ಚಿಕ್ಕಮ್ಮ, ಚಾಸಾ 4 ಮತ್ತು 5 ರವರು ಗೊತ್ತು, ಚಾಸಾ 6 ರವರು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೆ ಮಾಹಿತಿ ಇಲ್ಲ. ಪೊಲೀಸರ ಮುಂದೆ ಯಾವುದೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀಸವಾಲು ಸಸಅ ರವರಿಂದಃ–**

ದಿಃ 13.09.1998 ರಂದು ನಮ್ಮ ತಂದೆ ಮೃಯ್ಯು ಅಕಾಲಿಕ ಮರಣ ಹೊಂದಿದ್ದುರು ಎಂದರೆ ಸರಿ. ದಿಃ 22.06.2013 ರಂದು ನಮ್ಮ ಚಿಕ್ಕಪ್ಪ ಶಿವಣ್ಣ ಮರಣ ಹೊಂದಿದರು ಎಂದರೆ ಸರಿ. ನಮಗೆ ಅಡಿಗನಹಳ್ಳಿ ಸರ್ವೆ ನಂ. 74 ರಲ್ಲಿ 3 ಎಕರೆ 31 ಗುಂಟೆ ಜಮೀನು ಇದೆ ಎಂದರೆ ಸರಿ. ನಮ್ಮ ಚಿಕ್ಕಪ್ಪ, 2 ನೇ ದೊಡ್ಡಪ್ಪ ಮತ್ತು ಸಣ್ಣತಮ್ಮಣ್ಣನ ಹೆಂಡತಿ ಶಿವಮ್ಮ ರವರಿಗೆ ಜಂಟಿ ಖಾತೆಯಾಗಿ 35 ಗುಂಟೆ ಜಮೀನು ಇದ್ದು, ಆ ಜಮೀನಿನಲ್ಲಿ 3 ಭಾಗ ಆಗಿದ್ದು, 1 ಭಾಗದಲ್ಲಿ ನಾವು ಇದ್ದೇವೆ ಎಂದರೆ ಸರಿ. ನಂತರ ನಾವೆಲ್ಲರೂ ಖಾತೆ ಮಾಡಿಸೋಣ ಎಂದು ಆರ್.ಟಿ.ಸಿ ತೆಗೆದು ನೋಡಿದಾಗ ಕೆರೂರು ವೈಶ್ಯಾ ಬ್ಯಾಂಕ್ ಮೈಸೂರು 6 ಲಕ್ಷ ಹಣವನ್ನು 2015 ರಲ್ಲಿ ಸದರಿ ಭೂಮಿಯನ್ನು ಆರೋಪಿತರೆಲ್ಲರೂ ಸೇರಿ ನಮ್ಮ ಚಿಕ್ಕಪ್ಪ ಶಿವಣ್ಣ ಮೃತ ಪಟ್ಟಿದ್ದು ಗೊತ್ತಿದ್ದರೂ ಆರ್.ಟಿ.ಸಿ, ಋಣಭಾರ ಪ್ರಮಾಣ ಪತ್ರ ವಂಶ ವೃಕ್ಷ ಪ್ರಮಾಣ ಪತ್ರ, ಈ ಸ್ಟಾಂಪ್ ಪ್ರಮಾಣ ಪತ್ರ ಮತ್ತು ಇತರೆ ದಾಖಲೆಗನ್ನು ಸೃಷ್ಟಿಸಿಕೊಂಡು ನಮ್ಮ ತಂದೆ ಹೆಸರಿನಲ್ಲಿ ಶಂಕರ್ ಬಿನ್ ದಾಸಯ್ಯ ಎಂದು ಹಾಗೂ ಚಿಕ್ಕಪ್ಪ ಶಿವಣ್ಣನ ಹೆಸರಿನಲ್ಲಿ ಶಿವರಾಮು ತಾನು ಶಿವರಾಮು ಎಂದು ಘೋಷಿಸಿಕೊಳ್ಳುವ ಮೂಲಕ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದರು ಎಂದರೆ ಸರಿಯಲ್ಲ.

ಛಾಯಾದೇವಿ ಮತ್ತು ರವಿ ಸೇರಿಕೊಂಡು ಹುಣಸೂರಿನ ನೊಂದಣಾಧಿಕಾರಿ ಕಛೇರಿಯಲ್ಲಿ ನಮ್ಮ ಮಹದೇವಯ್ಯ ಬಿನ್ ದಾಸಯ್ಯ ರವರು ನನಗೆ ಮತ್ತು ನನ್ನ ಕುಟುಂಬಕ್ಕೆ ಮೋಸ ಮಾಡಲು ಆರೋಪಿತರೆಲ್ಲರೂ ಅಡಿಗನಹಳ್ಳಿ ಸರ್ವೆ ನಂ. 74 ಜಮೀನನ್ನು ಉಪ ನೊಂದಣಾಧಿಕಾರಿ ಕಛೇರಿಯಲ್ಲಿ ಮಾರ್ಟಗೇಜ್ ಮಾಡಿ ಮೋಸ ಮಾಡಿ ನಮ್ಮ ಜಮೀನನ್ನು 6 ಲಕ್ಷ ರೂ. ಗೆ ಸಾಲ ಪಡೆದು ಮೋಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈಗ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ. 1 ಎಂದು ಗುರುತಿಸಲಾಯಿತು. ಆರೋಪಿತರು ನಮ್ಮ ಊರಿನವರೆ ಅದ ಕಾರಣ ಅವರೆಲ್ಲರಿಗೂ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ಇರುವುದಿಲ್ಲ

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.